10

# ಕ್ರಿಸ್ತನ ಮಂದೆ

*"ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನು ಬೇರೆ ಕುರಿಗಳು ನನಗೆ ಅವೆ, ಅವುಗಳನ್ನೂ ನಾನು ತರಬೇಕು; ಅವು ನನ್ನ ಸ್ವರಕ್ಕೆ ಕಿವಿಗೊಡುವವು; ಆಗ ಒಂದೇ ಹಿಂಡು ಆಗುವದು, ಒಬ್ಬನೇ ಕುರುಬನಿರುವನು" (ಯೋಹಾನ 10:16).*

*"ಪರಿಶುದ್ಧಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ ..." (ಅಪೊಸ್ತಲರ ಕೃತ್ಯಗಳು 20:28).*

ಜವಾಬ್ದಾರಿಕೆಗಳಿಂದ ನಾನು ಭಾವಪರವಶವಾದಾಗ, ನಿರಾಶೆಗೊಂಡ ಗಡಿಯಾರದ ಬಗ್ಗೆ ಮಕ್ಕಳ ಕಥೆಯನ್ನು ಕುರಿತು ಯೋಚಿಸುತ್ತೇನೆ. ಒಂದು ತಾತ ಗಡಿಯಾರವು ಪ್ರತೀ ವರ್ಷ ಎಷ್ಟು ಸಲ ಟಿಕ್ ಶಬ್ದ ಮಾಡಬೇಕೆಂಬುದನ್ನು ಎಣಿಸಿತು. ಸಂಖ್ಯೆಯು ಅದನ್ನು ತತ್ತರಿಸುವಂತೆ ಮಾಡಿತು. ಆಶ್ಚರ್ಯಕರವಾದ ದೊಡ್ಡ ಸಂಖ್ಯೆಯನ್ನು ಕುರಿತು ಅದು ಯೋಚಿಸಿದಂತೆ, ಟಿಕ್ ಶಬ್ದ ಮಾಡುವದನ್ನು ಬಿಟ್ಟು ಬಿಡುವಂತೆ ನಿರ್ಧರಿಸುವಷ್ಟು ನಿರಾಶೆಗೊಂಡಿತು. ಅಷ್ಟು ಸಲ ಅದು ಟಿಕ್ ಶಬ್ದ ಮಾಡಲಾರದೆಂದು ನಿರ್ಣಯಿಸಿತು. ಜೊತೆ ಗಡಿಯಾರವು ಅದರ ನಿರಾಶೆಯನ್ನು ಅರಿತುಕೊಂಡು, ಅದರೊಂದಿಗೆ ಮಾತನಾಡಲು ಪ್ರಾರಂಭಿಸಿತು. ಅದು ಅದಕ್ಕೆ ಒಂದು ದಿನ ಒಂದು ಸಮಯಕ್ಕೆ ಮಾತ್ರ ಟಿಕ್ ಶಬ್ದಮಾಡಬೇಕು. ಒಂದು ಸಲಕ್ಕೆ ಒಂದು ತಾಸು, ಒಂದು ಸಲಕ್ಕೆ ಒಂದು ನಿಮಿಷ, ಒಂದು ಸಲಕ್ಕೆ ಒಂದು ಟಿಕ್ ಶಬ್ದ ಮಾಡಬೇಕಾಗುವದನ್ನು ನೋಡಲು ಸಹಾಯಮಾಡಿತು. ಅದರ ಉಪದೇಶವು ತಾತ ಗಡಿಯಾರದ ನಿರಾಶೆಯನ್ನು ತೆಗೆದು ಹಾಕಿತು ಒಂದು ಸಲಕ್ಕೆ ಒಂದೇ ಟಿಕ್ ಶಬ್ದ ಮಾಡಬೇಕೆಂಬ ಸತ್ಯವನ್ನು ಯೋಚಿಸಿ ಪುನಶ್ಚೇತನಗೊಂಡಿತು ಜೀವನದ ನಿರಾಶೆಯನ್ನು ತೆಗೆದು ಹಾಕಿತು. ಒಂದು ಟಿಕ್ ಶಬ್ದ ಮಾಡಬೇಕಾಗುವದನ್ನು ನೋಡಲು ಸಹಾಯಮಾಡಿತು. ಅದರ ಉಪದೇಶವು ತಾತ ಗಡಿಯಾರದ ನಿರಾಶೆಯನ್ನು ತೆಗೆದು ಹಾಕಿತು ಒಂದು ಸಲಕ್ಕೆ ಒಂದೇ ಟಿಕ್ ಶಬ್ದ ಮಾಡಬೇಕೆಂಬ ಸತ್ಯವನ್ನು ಯೋಚಿಸಿ ಪುನಶ್ಚೇತನಗೊಂಡಿತು ಜೀವನದ ಮೇಲೆ ಅದಕ್ಕೆ ಹೊಸ ನೋಟವನ್ನು ಕೊಟ್ಟಿತು, ಮತ್ತು ಪುನಃ ಟಿಕ್ ಶಬ್ದ ಮಾಡಲು ಪ್ರಾರಂಭಿಸುವಂತೆ ಅದನ್ನು ಪ್ರೋತ್ಸಾಹಿಸಿತು.

"ಆದದರಿಂದ ನಾಳಿನ ವಿಷಯವಾಗಿ ಚಿಂತೆ ಮಾಡಬೇಡಿರಿ; ನಾಳಿನ ದಿನವು ತನ್ನದನ್ನು ತಾನೇ ಚಿಂತಿಸಿಕೊಳ್ಳುವದು. ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು" (ಮತ್ತಾಯ 6:34) ಎಂದು ನಮ್ಮ ಕರ್ತನು ಬುದ್ಧಿವಾದ ಹೇಳಿದನು. ನಿರಾಶೆಗೆ ಒಂದು ಪರಿಹಾರವು ಜೀವಿತವು ಒಂದು ಸಲಕ್ಕೆ ಒಂದೇ ದಿನ ಜೀವಿಸಲ್ಪಡುತ್ತದೆ ಎಂಬುದನ್ನು ಜ್ಞಾಪಿಸಿಕೊಳ್ಳುವುದಾಗಿದೆ.

ನೀನು ಭಯಪಡುವವನಾಗಿರುವಿಯೋ? ದೇವರ ಜನರನ್ನು ಜಯಿಸಲಿಕ್ಕೆ ದುಷ್ಟನಿಗೆ ಅತ್ಯಧಿಕವಾದ ಬಲವಿರುವುದರ ಬಗ್ಗೆ ನೀನು ಚಿಂತಿಸುವಿಯೋ? ನಾಳೆಯ ದಿನವು ನಿನಗೆ ಏನನ್ನು ತರುವುದು ಎಂಬುದರ ಬಗ್ಗೆ ಚಿಂತಿಸುವಿಯೋ? ಕರ್ತನಿಗೆ ನಿನ್ನ ಹಂಗುಗಳನ್ನು ಪೂರೈಸುವದರ ಬಗ್ಗೆ ನೀನು ತೊಂದರೆಗೀಡಾಗಿರುವಿಯೋ?

ಯೇಸುವು ಈ ಭಯಗಳನ್ನೂ ಅನೇಕ ಇತರವುಗಳನ್ನೂ ಯೋಹಾನ 10ರಲ್ಲಿ ಒಂದು ದೃಷ್ಟಾಂತದಿಂದ ಮಾತಾಡಿದನು. ಆತನು ತನ್ನ ಶಿಷ್ಯರ ಬಗ್ಗೆ ತನ್ನ ಮಂದೆಯಂತೆ ಮಾತಾಡಿದನು ಮತ್ತು ಅವರಿಗೆ ತನ್ನ ಸಂಬಂಧವನ್ನು ಕುರಿಗಳಿಗೆ ಕುರುಬನಿಗಿರುವ ಸಂಬಂಧಕ್ಕೆ ಹೋಲಿಸಿ ಚಿತ್ರಿಸಿದನು. ನೀನು ಚಿಂತೆಯಲ್ಲಿರುವಾಗ, ಭಯದಲ್ಲಿರುವಾಗ, ಆತನ ದೃಷ್ಟಾಂತವನ್ನು ಜ್ಞಾಪಿಸಿಕೋ "ಲೋಕದಲ್ಲಿರುವವನಿಗಿಂತ ನಿಮ್ಮಲ್ಲಿರುವಾತನು ಹೆಚ್ಚಿನವನಾಗಿರುವನು" ಎಂಬ ಅರುಹಿನೊಂದಿಗೆ ಅದು ನಿಮ್ಮನ್ನು ಆದರಿಸುವುದು (1 ಯೋಹಾನ 4:4). ಯೇಸುವಿನ ಅನುಯಾಯಿಗಳು ಹೊಂದುವ ಮಹಾಪ್ರೀತಿ ಯನ್ನು ಮತ್ತು ಜೋಪಾಸನೆಯನ್ನು ಸಹ ನಿಮ್ಮ ಜ್ಞಾಪಕಕ್ಕೆ ಅದು ತರುವುದು.

ಆತನು ತನ್ನ ಸಭೆಯೆಂದು ಕರೆಯುವ ತನ್ನ ಅನುಯಾಯಿಗಳೊಂದಿಗೆ ಸಂಬಂಧವನ್ನು ನಿರೀಕ್ಷಿಸಿದಂತೆ, ಯೇಸುವು ಈ ಉದಾಹರಣೆಯನ್ನು[1] ಆ ಸಮಯದಲ್ಲಿ ತನ್ನ ಅನುಯಾಯಿಗಳೊಂದಿಗಿನ ತನ್ನ ಸಂಬಂಧದ ಬಗ್ಗೆ ಮಾತಾಡಲು ಉಪಯೋಗಿಸಿದನು (ಮತ್ತಾಯ 16:18). ಸಾಮ್ಯವು ಒಳ್ಳೇ ಕುರುಬನು ಕುರಿಗಳಿಗಾಗಿ ತನ್ನ ಪ್ರಾಣವನ್ನು ಕೊಡುವದನ್ನು ಚಿತ್ರಿಸುತ್ತದೆ (ಯೋಹಾನ 10:15, 17, 18). ಇದು ಸಭೆಯನ್ನು ಕೊಂಡುಕೊಳ್ಳುವುದಕ್ಕೆ ಕಾರಣವಾದ ಶಿಲುಬೆಗೆ ಹಾಕಲ್ಪಟ್ಟ ಯೇಸುವನ್ನು ನೇರವಾಗಿ ಉಲ್ಲೇಖಿಸುತ್ತದೆ (ಅಪೊಸ್ತಲರ ಕೃತ್ಯಗಳು 20:28; ಎಫೆಸ 5:25). ಆತನು ತನ್ನ ಬಳಿಗೆ ಬರುವ ಇತರ ಕುರಿಗಳ ಬಗ್ಗೆ ಮಾತಾಡಿದನು: "ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನು ಬೇರೆ ಕುರಿಗಳು ನನಗೆ ಅವೆ, ಅವುಗಳನ್ನೂ ನಾನು ತರಬೇಕು; ಅವು ನನ್ನ ಸ್ವರಕ್ಕೆ ಕಿವಿಗೊಡುವವು; ಆಗ ಒಂದೇ ಹಿಂಡು ಆಗುವುದು, ಒಬ್ಬನೇ ಕುರುಬನಿರುವನು" (ಯೋಹಾನ 10:16). ಈ ವಚನಗಳು ಇಂದು ಸಭೆಯು ಕ್ರಿಸ್ತನ ಮಂದೆಯಂತೆ ನೋಡಲ್ಪಡಬೇಕೆಂದು ನಮಗೆ ತೋರಿಸುತ್ತವೆ.

ಸಭೆಯನ್ನು ಆತನ ಮಂದೆಯಂತೆ ಯೋಚಿಸುವುದು ಕ್ರಿಸ್ತನು ತನ್ನ ಸಭೆಗಾಗಿ ಏನುಮಾಡುವನು ಎಂಬುದನ್ನು ಮೆಚ್ಚಿಕೊಳ್ಳಲು ನಮಗೆ ಕಾರಣವಾಗುವುದು. ಆದುದರಿಂದ, ನಾವು ಹೀಗೆ ಪ್ರಶ್ನಿಸೋಣ, "ಕ್ರಿಸ್ತನಿಗೆ ಆತನ ಮಂದೆಯಾದ ಸಭೆಯೊಂದಿಗೆ ಯಾವ ಸಂಬಂಧವಿದೆ? ಕ್ರಿಸ್ತನು ಕುರುಬನಂತೆ ತನ್ನ ಸಭೆಗಾಗಿ ಏನನ್ನು ಮಾಡುತ್ತಾನೆ?"

## ಕ್ರಿಸ್ತನು ಸಭೆಯ ಕರ್ತನಾಗಿದ್ದಾನೆ

ಈ ಸಾಮ್ಯದಿಂದ ಪ್ರಕಟವಾಗುವ ಮೊದಲನೆಯ ಸತ್ಯವು ಕ್ರಿಸ್ತನು ಸಭೆಯ ಕರ್ತನಾಗಿದ್ದಾನೆ ಎಂಬುದು. ಯೇಸುವು ತನ್ನನ್ನು ಹೋಲಿಸಿಕೊಳ್ಳುವ ಕುರುಬನಿಗೆ ಕುರಿಗಳಿರುತ್ತವೆ; ಅವನು ಮಂದೆಯ ಸಾರ್ವಭೌಮ ಆಳುವವನಾಗಿದ್ದಾನೆ.

ಕುರಿಯು ಕುರುಬನ ವೈಯಕ್ತಿಕ ಆಸ್ತಿಯಾಗಿರುವಂತೆ, ಮಂದೆಯನ್ನು ಪ್ರವೇಶಿಸುವವರು ಕ್ರಿಸ್ತನ ಸ್ವಾಸ್ಥ್ಯವಾಗುತ್ತಾರೆ. ಒಡೆತನದ ಈ ತತ್ವವು ಎರಡು ದಿಶೆಗಳಲ್ಲಿ ಹೋಗುತ್ತದೆ: ಮೊದಲನೆಯದು, ಕುರಿಯು ಕುರುಬನಿಗಾಗಿ ಜೀವಿ ಸುವುದೆಂದು, ಅನ್ವಯಿಸುತ್ತದೆ. ನಾವು ಕ್ರಿಸ್ತನಿಗೆ ಒಳಪಟ್ಟಿರುವದರಿಂದ, ನಾವು

ಕ್ರಿಸ್ತನ ಸೇವಕರಾಗಿರುತ್ತೇವೆ (ಫಿಲಿಪ್ಪಿ 1:1). ಎರಡನೆಯದು, ಕುರುಬನು ಕುರಿಗಾಗಿ ಜೀವಿಸುವನೆಂಬುದನ್ನು ಸೂಚಿಸುತ್ತದೆ. ಕುರಿಗಳ ಒಡೆಯನಂತೆ, ಕುರುಬನು ಕುರಿಯನ್ನು ಪ್ರೀತಿಸುವನು. ಅವುಗಳಿಗಾಗಿ ಜವಾಬ್ದಾರನಾಗಿರುವನು, ಮತ್ತು ಅವುಗಳ ಜೋಪಾಸನೆಗಾಗಿ ಒದಗಿಸುವನು. ಒಡೆತನವು ಭಾರವಾದ ಜವಾಬ್ದಾರಿಕೆಯಿಂದ ತುಂಬಿಕೊಂಡಿರುವುದು, ಮತ್ತು ಒಳ್ಳೇ ಕುರುಬನು ಆ ಜವಾಬ್ದಾರಿಕೆಯನ್ನು ಪೂರೈಸುವನು.

"ನಮ್ಮ ಮಕ್ಕಳಿಗಾಗಿ ಅವರ ತಂದೆತಾಯಿಗಳು ಜೋಪಾಸನೆ ಮಾಡುವದಕ್ಕಿಂತ ಹೆಚ್ಚಾಗಿ ಬೇರೆ ಯಾರೂ ಜೋಪಾಸನೆ ಮಾಡುವದಿಲ್ಲ" ಎಂದು ಯಾರೋ ಒಬ್ಬರು ಹೇಳಿದ್ದಾರೆ. ಈ ಸತ್ಯಕ್ಕಾಗಿ ಕಾರಣವು ಸ್ಪಷ್ಟವಾಗಿದೆ: ತಂದೆ ತಾಯಿಗಳು ತಮ್ಮ ಮಕ್ಕಳನ್ನು ಪ್ರತ್ಯೇಕವಾಗಿ ತಮ್ಮವರೆಂದು ಗುರುತಿಸುತ್ತಾರೆ. ಅವರು ತಮ್ಮ ಮಕ್ಕಳನ್ನು ಲೋಕದಲ್ಲಿ ತಂದವರು; ಅವರು ಒಂದೇ ಮಾಂಸ ಮತ್ತು ರಕ್ತ; ಅವರು ಅವರಿಗೆ ಜವಾಬ್ದಾರರು. ಅವರು ತಮ್ಮ ಮಕ್ಕಳ ಬಗ್ಗೆ ಆನಂದಿಸುವರು, ಅವರಿಗಾಗಿ ಒದಗಿಸುವರು ಮತ್ತು ಅವರ ಭವಿಷ್ಯಕ್ಕಾಗಿ ಯೋಚಿಸುವರು.

ದೇವರ ಸರ್ವಶಕ್ತ ಕುಮಾರನಾದ ಕ್ರಿಸ್ತನು ತನ್ನ ಸ್ವಂತದವರಿಗಾಗಿ ಸಂಪೂರ್ಣವಾಗಿ ಮೃದುವಾಗಿ ಜೋಪಾನ ಮಾಡುವನೆಂಬುದರ ಬಗ್ಗೆ ನಮಗೆ ನಿಶ್ಚಿತತೆ ಇರಬೇಕು. ದಾವೀದನು, ತನ್ನ ಕೃತಜ್ಞತಾಸ್ತುತಿಯ ಕೀರ್ತನೆಯಲ್ಲಿ ತನ್ನ ದೈಹಿಕ ಅಗತ್ಯತೆಗಳಿಗಾಗಿ ದೇವರ ಸತತವಾದ ಜೋಪಾಸನೆಗಾಗಿ ದೇವರಿಗೆ ಕೃತಜ್ಞತೆ ಹೇಳಿದನು: "ನಾನು ಬಾಲಕನಾಗಿದ್ದೆನು, ಈಗ ವೃದ್ಧನಾಗಿದ್ದೇನೆ; ಈ ವರೆಗೂ ನೀತಿವಂತನು ದಿಕ್ಕಿಲ್ಲದೆ ಬಿದ್ದಿರುವದನ್ನಾಗಲಿ ಅವನ ಸಂತತಿಯವರು ಭಿಕ್ಷ ಬೇಡಿ ತಿನ್ನುವದನ್ನಾಗಲಿ ನೋಡಲಿಲ್ಲ" (ಕೀರ್ತನೆ 37:25). ಯೇಸುವು ಪರ್ವತ ಪ್ರಸಂಗದಲ್ಲಿ ತನ್ನ ಶಿಷ್ಯರಿಗೆ, " 'ಏನು ಊಟಮಾಡಬೇಕು,' 'ಏನು ಕುಡಿಯಬೇಕು,' 'ಏನು ಹೊದ್ದುಕೊಳ್ಳಬೇಕು' ಎಂದು ಚಿಂತೆ ಮಾಡಬೇಡಿರಿ" (ಮತ್ತಾಯ 6:31) ಎಂದು ಹೇಳಿದನು "ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತ್ಯಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು" (ಯೋಹಾನ 10:10) ಎಂದು ಯೇಸು ಹೇಳಿದನು. ನಮ್ಮ ಒಳ್ಳೇ ಕುರುಬನು ನಮ್ಮನು ಹೊಂದಿಕೊಂಡಿರುತ್ತಾನೆ, ಮತ್ತು ನಮ್ಮ ದೈಹಿಕ ಹಾಗೂ ಆತ್ಮಿಕ ಅಗತ್ಯತೆಗಳನ್ನು ನೋಡಿಕೊಳ್ಳುತ್ತಾನೆ.

ಈ ಸತ್ಯವು ನಮ್ಮ ಮೇಲೆ ಬಹಳವಾಗಿ ಪರಿಣಾಮಮಾಡಬೇಕು. ಕ್ರಿಸ್ತನ ನಮ್ಮ ಒಡೆತನವು ಆತನು ನಮ್ಮನ್ನು ವಶಪಡಿಸಿಕೊಂಡಿರುವನೆಂದು ಅರ್ಥಕೊಡುತ್ತದೆ. ನಾವು ಯಾಕೆ ಚಿಂತಿಸಬೇಕು? ನಾವು ಯಾಕೆ ಭಯಪಡಬೇಕು? ನಿಮ್ಮ ಮೇಲೆ ಕಾಯುತ್ತಿರುವ ಒಳ್ಳೇ ಕುರುಬನಲ್ಲಿ ನಂಬಿಕೆಯಿಡಿರಿ. ಯೇಸುವನ್ನು ಕರ್ತನಂತೆ ಹಿಂಬಾಲಿಸುವುದು ನಮ್ಮ ಹಂಗು ಆಗಿರುತ್ತದೆ; ಪ್ರತಿಯೊಂದನ್ನೂ ಆತನು ಕೈಕೊಳ್ಳುತ್ತಾನೆ.

## ಕ್ರಿಸ್ತನು ಸಭೆಯನ್ನು ನಡಿಸುತ್ತಾನೆ

ಎರಡನೆಯದು, "ಒಳ್ಳೇ ಕುರುಬನ" ಸಾಮ್ಯವು ಕ್ರಿಸ್ತನು ಸಭೆಯನ್ನು ನಡಿಸುತ್ತಾನೆ ಎಂಬುದನ್ನು ಜ್ಞಾಪಿಸುತ್ತದೆ. ಕುರಿಯು ತನ್ನ ಕುರುಬನನ್ನು ಹಿಂಬಾಲಿಸುವಂತೆ, ಸಭೆಯು ಕ್ರಿಸ್ತನನ್ನು ಹಿಂಬಾಲಿಸುತ್ತದೆ. ನಾವು ಆತನ ಧ್ವನಿಯನ್ನು ಗುರಿತಿಸುತ್ತೇವೆ. ಯೇಸುವು ಹೀಗೆ ಹೇಳಿದನು,

> ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಕುರೀ ಹಟ್ಟಿಯೊಳಗೆ ಬಾಗಲಿಂದ ಬಾರದೆ, ಮತ್ತೆಲ್ಲಿಂದಾದರೂ ಹತ್ತಿಬರುವವನು ಕಳ್ಳನೂ ಸುಲುಕೊಳ್ಳುವವನೂ ಆಗಿದ್ದಾನೆ. ಬಾಗಲಿನಿಂದ ಒಳಗೆ ಬರುವವನು ಆ ಕುರಿಗಳ ಕುರುಬನು. ಬಾಗಲು ಕಾಯುವವನು ಅವನಿಗೆ ಬಾಗಲನ್ನು ತೆರೆಯುತ್ತಾನೆ, ಕುರಿಗಳು ಅವನ ಸ್ವರಕ್ಕೆ ಕಿವಿಗೊಡುತ್ತವೆ. ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಹೊರಗೆ ಬಿಡುತ್ತಾನೆ (ಯೋಹಾನ 10:1-3).

ಪ್ರತೀ ರಾತ್ರಿ, ಕುರುಬನು ತನ್ನ ಕುರಿಗಳನ್ನು ಕುರಿಹಟ್ಟಿಯೊಳಗೆ ಸುತ್ತಲೂ ಗೋಡೆಗಳು, ಒಂದು ಬಾಗಲು ಇದ್ದ ಸ್ಥಳದೊಳಗೆ ತರುತ್ತಾನೆ. ಆ ಬಾಗಿಲಿನ ಬಳಿಯಲ್ಲಿ ಇಡೀ ರಾತ್ರಿಯೆಲ್ಲಾ ಒಬ್ಬ ಕಾವಲುಗಾರನಿರುತ್ತಾನೆ. ಪ್ರಾತಃಕಾಲದಲ್ಲಿ, ಕುರುಬನು ಬರುವನು ಮತ್ತು ಕಾವಲುಗಾರನಿಂದ ಗುರುತಿಸಲ್ಪಡುವನು. ಆಗ ಅವನು ಹಟ್ಟಿಯೊಳಗೆ ಪ್ರವೇಶಿಸಲು ಬಿಡಲ್ಪಡುವನು ಅವನೇ ತನ್ನ ಕುರಿಗಳನ್ನು ತನ್ನ ಬಳಿಗೆ ಕರೆಯುವನು ಮತ್ತು ಹುಲ್ಲುಗಾವಲುಗಳಿಗೆ ಕರೆದುಕೊಂಡು ಹೋಗುವನು. ಕಳ್ಳನು ಇಲ್ಲವೇ ಕದ್ದು ಕೊಳ್ಳುವವನು ಹಟ್ಟಿಯೊಳಗೆ ಪ್ರವೇಶಿಸಲು ಗೋಡೆಗಳ ಮೇಲೆ ಹತ್ತಬೇಕಾಗುವುದು. ಕಾವಲುಗಾರನಿಂದ ಅವನು ಗುರುತು ಹಿಡಿಯಲ್ಪಡುವದಿಲ್ಲ ಮತ್ತು ಅವನು ಹಟ್ಟಿಯೊಳಗೆ ಪ್ರವೇಶಿಸಲು ಬಿಡಸಲ್ಪಡುವದಿಲ್ಲ.

"ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು, ಹೊರಗೆ ಬಿಡುತ್ತಾನೆ, ಸ್ವಂತ ಕುರಿಗಳನ್ನೆಲ್ಲಾ ಹೊರಗೆ ಬಿಟ್ಟ ಮೇಲೆ ತಾನು ಅವುಗಳ ಮುಂದೆ ಹೋಗುತ್ತಾನೆ; ಕುರಿಗಳು ಅವನ ಸ್ವರವನ್ನು ತಿಳುಕೊಂಡು ಅವನ ಹಿಂದೆ ಹೋಗುತ್ತವೆ. ಅವು ಅನ್ಯರ ಸ್ವರವನ್ನು ತಿಳಿಯುವದಿಲ್ಲ; ಅನ್ಯನ ಹಿಂದೆ ಹೋಗದೆ ಅವನ ಬಳಿಯಿಂದ ಓಡಿಹೋಗುತ್ತವೆ" (ಯೋಹಾನ 10:4, 5) ಎಂದೂ ಯೇಸು ಹೇಳಿದನು. ಪ್ರಾತಃಕ್ಕಾಲದಲ್ಲಿ, ಕುರುಬನು ಕುರಿ ಹಟ್ಟಿಯೊಳಗಿಂದ ತನ್ನ ಕುರಿಗಳನ್ನು ಹೊರಗೆ ತೆಗೆದು ಕೊಂಡು ಹೋಗಲು ಬರುವಾಗ, ಅವನು ಕುರಿ ಹಟ್ಟಿಯ ಬಾಗಿಲಿನ ಮುಂದೆ ನಡೆದು ಹೋಗಿ, ಕುರಿಗಳನ್ನು ಕರೆಯುವನು. ಅವನ ಕುರಿಗಳು ಅವನ ಧ್ವನಿಯನ್ನು ಕೇಳುವವು ಮತ್ತು ಅವನ ಬಳಿಗೆ ಓಡಿ ಬರುವವು. ಕುರಿಗಳು ಹಟ್ಟಿಯನ್ನು ಬಿಡುವಾಗ, ಕುರುಬನನ್ನು ಬಿಟ್ಟರೆ ಅವುಗಳಿಗೆ ಬೇರೆಯಾವ ಸಹಾಯಕರೂ ಇರುವದಿಲ್ಲ. ಅವು ಯಾವ ಭಯವೂ ಇಲ್ಲದೇ ಹಾಗೂ ತೊಂದರೆಯಿಲ್ಲದೇ ಮೇಯುವದಕ್ಕೆ ಅವುಗಳನ್ನು ನಡಿಸುವದಕ್ಕೆ ಅವು ಅವನ ಮೇಲೆ ಅವಲಂಬಿಸಿರುವವು.

ಕುರುಬನು ತನ್ನ ಕುರಿಗಳ ಮೇಲೆ ಸಂಪೂರ್ಣವಾಗಿ ಯಜಮಾನನಾಗಿದ್ದಾನೆ. ಅವನು ನಡಿಸಿದಲ್ಲಿಗೆ ಕುರಿಗಳು ಹೋಗುವವು. ಅವು ಅವನ ನಡಿಸುವಿಕೆಯಲ್ಲಿ ಇರುವವು. ಎಲ್ಲಾ ಪ್ರಾಣಿಗಳಲ್ಲಿ, ಕುರಿಗಳು ಮಾತ್ರ ಹಿಂಬಾಲಿಸುವ ಗುಣವುಳ್ಳವುಗಳಾಗಿರುತ್ತವೆ. ಅವುಗಳಿಗೆ ದಿಕ್ಕಿನ ಒಳ್ಳೇ ಜ್ಞಾನ ಇರುವದಿಲ್ಲ. ತಮ್ಮಷ್ಟಕ್ಕೆ ತಾವೇ ಸ್ಥಳಗಳನ್ನು ಹುಡುಕಿಕೊಂಡು ಹೋಗುವುದು ಆಕಸ್ಮಿಕಗಳಾಗಿರುತ್ತವೆ. ಯೋಗ್ಯವಾಗಿ ನಡಿಸಲ್ಪಟ್ಟರೆ, ಅವು ಒಳ್ಳೆಯ ಜೀವಿತವನ್ನು ಅನುಭವಿಸುವವು.

ಈ ರೀತಿಯಲ್ಲಿ ನಾವು ಕುರಿಗಳಂತಿರುವೆವು. ನಾಯಕತ್ವವಿಲ್ಲದೇ, ಸಹಾಯಕ ಹಸ್ತಕ್ಕಾಗಿ ಎಡವುತ್ತ ತಡಕಾಡುವ ಕುರುಡನಂತಿರುವೆವು. "ನಾವೆಲ್ಲರೂ ಕುರಿಗಳಂತೆ ದಾರಿ ತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು ..." (ಯೆಶಾಯ 53:6) ಎಂದು ಯೆಶಾಯನು ಬರೆದನು. "ಮಾನವನ ಮಾರ್ಗವು ಅವನ ಸ್ವಾಧೀನದಲ್ಲಿಲ್ಲವೆಂದು ನನಗೆಗೊತ್ತು; ಮನುಷ್ಯನು ನಡೆದಾಡುತ್ತಾ ಸರಿಯಾದ

ಕಡೆಗೆ ತನ್ನ ಹೆಜ್ಜೆಯನ್ನಿಡಲಾರನು" (ಯೆರೆಮೀಯ 10:23) ಎಂದು ಯೆರೆಮೀಯನು ಹೇಳಿದ್ದಾನೆ. ನಮಗೆ ಯೋಗ್ಯವಾದ ಮಾರ್ಗದರ್ಶನವಿರತಕ್ಕದ್ದು, ಇಲ್ಲದಿದ್ದರೆ ದುಃಖಾಂತ್ಯವು ನಮಗೆ ಕಾದಿರುವುದು.

ಕುರಿಗಳಿಗೆ ಒಳ್ಳೇ ಕುರುಬನು ಏನಾಗಿರುವನೋ ಅದು ನಮಗಾಗಿ ಯೇಸುವಾಗಿದ್ದಾನೆ - ಆತನು ನಮ್ಮ ನಾಯಕನು, ಮತ್ತು ಮಾರ್ಗದರ್ಶಿಯು. ಆತನು ಸಭೆಯ ಶಿರಸ್ಸಾಗಿರುವನು (ಎಫೆಸ 5:23), ನಮ್ಮನ್ನು ಮಹಿಮೆಗೆ ತರುವ ನಮ್ಮ ರಕ್ಷಣೆಯ ಕ್ಯಾಪ್ಟನ್‌ನಾಗಿರುವನು (ಇಬ್ರಿಯ 2:10). "ನಾವು ಆತನನ್ನು ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ" ಎಂದು ನೋಡುತ್ತೇವೆ (1 ಕೊರಿಂಥ 1:30). ನಮ್ಮ ಬಲಹೀನತೆಗಳ ಮತ್ತು ಆತನು ಯಾರಾಗಿದ್ದಾನೆ ಎಂಬುದರ ಅರುಹನ್ನು ಹೊಂದುವುದು, ಕ್ರೈಸ್ತ ಓಟದ ಕಾರ್ಯವು, "ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ಓಡುವುದಾಗಿದೆ" (ಇಬ್ರಿಯ 12:2). ನಾವು ಆತನ ಕಡೆಗೆ ನೋಡುವುದಷ್ಟೇ ಅಲ್ಲ; ಆತನು ನಮ್ಮ ನಾಯಕನೂ ಕರ್ತನೂ ಆಗಿರುವಂತೆ ಆತನ ಕಡೆಗೆ ನೋಡುತ್ತೇವೆ.

ಕಡಿದಾದ ಏರುವಿಕೆಗಳೂ ಇಳಿಯುವಿಕೆಗಳೂ ತೀರ್ವ ತಿರುವುಗಳೂ, ತಗ್ಗುಗಳೂ ಇರುವ ಬೆಟ್ಟದ ಮಾರ್ಗದಲ್ಲಿ, ಮಧ್ಯ ರಾತ್ರಿಯಲ್ಲಿ, ಹೆಡ್‌ಲೈಟುಗಳಿಲ್ಲದೇ ವಾಹನವನ್ನು ಓಡಿಸುತ್ತಿರುವಿರೆಂದು ಕಲ್ಪಿಸಿಕೊಳ್ಳಿರಿ. ಹಾಗೆ ಮಾಡುವುದು ಆತ್ಮಹತ್ಯೆ ಮಾಡಿಕೊಳ್ಳುವದಕ್ಕೆ ಸಮವಾಗಿದೆ. ಅಪಘಾತವಾಗುವುದು ನಿಶ್ಚಿತ; ಎಲ್ಲಿ ಮತ್ತು ಯಾವಾಗ ಅಪಘಾತವು ಸಂಭವಿಸುವುದೆಂಬುದನ್ನು ನೀವು ತಿಳಿಯಲಾರಿರಿ; ದೈವಿಕ ಮಾರ್ಗದರ್ಶನವಿಲ್ಲದೇ ಈ ಲೋಕದೊಳಗೆ ಆತನ ಮಾರ್ಗವನ್ನು ಮಾಡಿಕೊಳ್ಳಲು ಪ್ರಯತ್ನಿಸುವ ಪಾಪಭರಿತ ವ್ಯಕ್ತಿಯ ಸ್ಪಷ್ಟ ಚಿತ್ರದ ಸ್ಥಿತಿ ಇದಾಗಿದೆ. ಗಂಡಾಂತರ ಕಾರಿಯಾದ ರಸ್ತೆಯಲ್ಲಿ ಹೆಡ್‌ಲೈಟುಗಳಿಲ್ಲದೇ ಕಾರನ್ನು ನಡಿಸುವ ವ್ಯಕ್ತಿಯಂತೆ, ಅವನು ನಾಶನಕ್ಕೆ ಮುನ್ನುಗ್ಗುತ್ತಿದ್ದಾನೆ!

ಹೀಗಿದ್ದರೂ, ಯೇಸುವು ತನ್ನ ಕುರಿಗಳಿಗೆ ದೈವಿಕ ಮಾರ್ಗದರ್ಶನ ಕೊಡುವೆನೆಂದು ಭರವಸೆ ಕೊಡುತ್ತಾನೆ, ಅದರಿಂದ ಜೀವನದ ಪರ್ವತಗಳ, ಕಣಿವೆಗಳ, ತಗ್ಗುಗಳ ಮತ್ತು ಕೊಳ್ಳಗಳ ಯಾವ ಭಯವೂ ನಮಗಿರುವದಿಲ್ಲ. ಯೇಸುವು ನಮ್ಮ ನಾಯಕನಾಗಿರುವಾಗ, ಜೀವನದಲ್ಲಿ ಪ್ರಯಾಣ ಮಾಡುವಾಗ ನಾವು ಸುರಕ್ಷಿತತೆಯಲ್ಲಿ ವಿಶ್ರಮಿಸಬಹುದು.

ಆಫ್ರಿಕಾದ ಜಂಗಲ್ ವಿಭಾಗದಲ್ಲಿ ಬೇಟೆಗಾರರ ಒಂದು ಗುಂಪು ತಮ್ಮ ಪ್ರಯಾಣ ಪ್ರಾರಂಭಿಸಲಿಕ್ಕಿತ್ತು. ಅವರ ಮಾರ್ಗದರ್ಶನಿಗೆ, "ನಿನ್ನಲ್ಲಿ ಒಂದು ಮ್ಯಾಪ್ ಇದೆಯೋ?" ಎಂದು ಅವರು ಕೇಳಿದರು. "ನಾನೇ ನಿಮ್ಮ ಮ್ಯಾಪ್ ಆಗಿದ್ದೇನೆ!" ಎಂದು ಅವನು ಉತ್ತರ ಕೊಟ್ಟನು. ಇದು ನಮಗೆ ಯೇಸುವಿನ ಸಂಬಂಧವಾಗಿದೆ - ಆತನ ವಾಕ್ಯದ ಮುಖಾಂತರ ಆತನು ನಮ್ಮ ಮ್ಯಾಪ್ ಆಗಿದ್ದಾನೆ. "ಒಬ್ಬನು ಯೇಸುವನ್ನು ಹಿಂಬಾಲಿಸದೇ ಆತನನ್ನು ಆಲಿಸಬಹುದು, ಆದರೆ ಆತನನ್ನು ಆಲಿಸದೇ ಒಬ್ಬನು ಯೇಸುವನ್ನು ಹಿಂಬಾಲಿಸಲಾರನು" ಎಂದು ಯಾರೋ ಹೇಳಿದ್ದಾರೆ. ನಾವು ಆತನ ವಾಕ್ಯವನ್ನು ಕೇಳುತ್ತೇವೆ ಮತ್ತು ಆತನನ್ನು ಹಿಂಬಾಲಿಸುತ್ತೇವೆ.

ಮಾರ್ಗ ತೋರಿಸುವದರ ಬಗ್ಗೆ ನಮಗೆ ಹೆಚ್ಚು ಜ್ಞಾನವಿರುವದಿಲ್ಲ ಎಂಬ ಅರುಹನ್ನು ಎದುರಿಸುವಾಗ, ಅದು ನಮಗೆ ನಿರಾಶರನ್ನಾಗಿ ಮಾಡುವುದಾಗಿರಬಹುದು, ಆದರೆ ನಮಗೆ ಸರ್ವ ಜ್ಞಾನಿಯಾದ, ತಪ್ಪು ಮಾಡುವ ಕುರುಬನು ನಮಗಿದ್ದಾನೆಂದು ಗುರುತಿಸಿಕೊಳ್ಳುವಾಗ, ಅದು ನಮ್ಮಲ್ಲಿರುವ ನಮ್ಮ ನಿರಾಶೆಗಳನ್ನು, ಯೇಸುವಿನೊಂದಿಗೆ

ನಮ್ಮ ಸಂಬಂಧಕ್ಕಾಗಿ ಅಂತ್ಯವಿಲ್ಲದ ಮೆಚ್ಚಿಕೆಯೊಳಗೆ ತಿರುಗುವಂತೆ ಮಾಡುವುದು. ನಮ್ಮ ಅತ್ಯಂತ ನಿರ್ಣಾಯಕವಾದ ಅಗತ್ಯತೆಯು ನಮ್ಮ ಸರ್ವಶಕ್ತ, ಸರ್ವಜ್ಞಾನಿಯಾದ ನಾಯಕನಿಂದ ಪೂರೈಸಲ್ಪಡುವುದು.

## ಕ್ರಿಸ್ತನು ಸಭೆಯನ್ನು ಪ್ರೀತಿಸುತ್ತಾನೆ

ಮೂರನೆಯದಾಗಿ, ಈ ಸಾಮ್ಯವು ಸಭೆಯನ್ನು ಪ್ರೀತಿಸುವ ಮತ್ತು ಅದಕ್ಕಾಗಿ ತನ್ನ ಪ್ರಾಣವನ್ನು ಸಂತೋಷದಿಂದ ಕೊಡುವ ಒಳ್ಳೇ ಕುರುಬನಂತೆ ಕ್ರಿಸ್ತನನ್ನು ಚಿತ್ರಿಸುತ್ತದೆ. ಆತನು ತನ್ನ ಕುರಿಗಳಿಗಾಗಿ ಜೋಪಾಸನೆ ಮಾಡುತ್ತಾನೆ ಮತ್ತು ತನ್ನ ಜೀವವನ್ನು ತ್ಯಾಗಮಾಡಿ ಅವುಗಳನ್ನು ಕಾಪಾಡುತ್ತಾನೆ. ಯೇಸುವು ಹೀಗೆ ಹೇಳಿದನು,

> ನಾನೇ ಒಳ್ಳೇ ಕುರುಬನು; ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ. ಕೂಲಿಯಾಳು ಕುರುಬನೂ ಕುರಿಗಳ ಒಡೆಯನೂ ಆಗಿರದೆ ತೋಳ ಬರುವದನ್ನು ಕಾಣುತ್ತಲೇ ಕುರಿಗಳನ್ನು ಬಿಟ್ಟು ಓಡಿಹೋಗು ತ್ತಾನೆ; ತೋಳವು ಅವುಗಳನ್ನು ಹಿಡಿಕೊಂಡು ಹಿಂಡನ್ನು ಚದುರಿಸುತ್ತದೆ. ಅವನು ಕೂಲಿಯಾಳು; ಕುರಿಗಳ ಚಿಂತೆ ಅವನಿಗಿಲ್ಲ. ನಾನೇ ಒಳ್ಳೇ ಕುರುಬನು; ತಂದೆಯು ನನ್ನನ್ನು ನಾನು ತಂದೆಯನ್ನು ತಿಳಿದಿರುವಂತೆಯೇ ನಾನು ನನ್ನ ಕುರಿಗಳನ್ನು ತಿಳಿದಿದ್ದೇನೆ; ನನ್ನ ಕುರಿಗಳು ನನ್ನನು ತಿಳಿದವೆ; ಮತ್ತು ಕುರಿಗಳಿಗೋಸ್ಕರ ನನ್ನ ಪ್ರಾಣವನ್ನು ಕೊಡುತ್ತೇನೆ (ಯೋಹಾನ 10:11-15).

ಯೇಸುವು ಒಳ್ಳೇಯ ಕುರುಬನಂತೆ ಇತರ ಎರಡು ರೀತಿಯ ಕುರುಬರಿಗೆ ಬಹಳವಾಗಿ ವಿರುದ್ಧವಾದ ರೀತಿಯಲ್ಲಿ ನಿಂತುಕೊಳ್ಳುತ್ತಾನೆ. ಮೊದಲನೆಯದು, ಆತನು ಕೂಲಿಯಾಳಿನಂತೆ ಇರುವದಿಲ್ಲ. ತನ್ನ ಕೆಲಸದಿಂದ ಸಂಬಳ ಪಡೆಯುವದಕ್ಕಾಗಿ ಮಾತ್ರವೇ ಕೂಲಿಯಾಳು ಕೆಲಸ ಮಾಡುತ್ತಾನೆ. ಒಬ್ಬ ಕೂಲಿಯಾಳು ಪ್ರತಿಫಲಕ್ಕಾಗಿ ಕೆಲಸ ಮಾಡುವವನಾಗಿರುತ್ತಾನೆ; ಅವನು ತನ್ನ ಕೆಲಸ ಮಾಡುವದಕ್ಕಾಗಿ ಅವನಿಗೆ ಕೂಲಿ ಕೊಡಲ್ಪಡುತ್ತದೆ. ಅವನು ಕೆಡುಕನಾಗಲೀ, ದುಷ್ಟನಾಗಲೀ ಆಗಿರದಿದ್ದರೂ, ಒಳ್ಳೇ ಕುರುಬನಿಗಿದ್ದ ಕುರಿಗಳಿಗಾಗಿರುವ ವೈಯಕ್ತಿಕ ಚಿಂತನೆಯು ಅವನಿಗಿರುವದಿಲ್ಲ. ಒಮ್ಮೆ ಅವನ ಕೆಲಸ ಮುಗಿದರೆ, ಕುರಿಗಳ ಕಡೆಗೆ ಅವನ ಕರ್ತವ್ಯವಿರುವದಿಲ್ಲ. ಎರಡನೆಯದು, ವೈಯಕ್ತಿಕ ಲಾಭಗಳ ಕಾರಣದಿಂದ ತನ್ನ ಕರ್ತವ್ಯದಲ್ಲಿ ಸೋತು ಹೋಗುವ ಅಪನಂಬಿಗಸ್ತ ಕುರುಬನಂತೆ ಯೇಸುವು ಇರುವದಿಲ್ಲ. ಯೆಹೆಜ್ಕೇಲನು ದೇವರಿಗಾಗಿ ಮಾತಾಡಿದಾಗ, ಚುರುಕಾದ ಬಾಷೆಯಲ್ಲಿ ಅಪನಂಬಿಗಸ್ತ ಕುರುಬನ ಬಗ್ಗೆ ಬರೆದನು:

> ನೀವು ದುರ್ಬಲವಾದವುಗಳನ್ನು ಬಲಗೊಳಿಸಲಿಲ್ಲ, ರೋಗದವುಗಳನ್ನು ಸ್ವಸ್ಥ ಮಾಡಲಿಲ್ಲ, ಮುರಿದ ಅಂಗಗಳನ್ನು ಕಟ್ಟಲಿಲ್ಲ, ಓಡಿಸಿದವುಗಳನ್ನು ಮಂದೆಗೆ ಸೇರಿಸಲಿಲ್ಲ, ತಪ್ಪಿಸಿಕೊಂಡವುಗಳನ್ನು ಹುಡುಕಲಿಲ್ಲ; ಅವುಗಳನ್ನು ಹಿಂಸೆಬಲಾತ್ಕಾರಗಳಿಂದ ಆಳುತ್ತಾ ಬಂದಿದ್ದೀರಿ. ಕುರುಬರು ಇರಲಿಲ್ಲವಾದ ದರಿಂದ ಅವು ಚದರಿಹೋದವು; ದಿಕ್ಕಾಪಾಲಾಗಿ ಕಾಡಿನ ಸಕಲ ಮೃಗಗಳಿಗೆ ತುತ್ತಾದವು; ನನ್ನ ಕುರಿಗಳು ಮಲೆನಾಡಿನಲ್ಲೆಲ್ಲಾ ಎತ್ತರವಾದ ಪ್ರತಿಯೊಂದು ಬೆಟ್ಟದ ಮೇಲೆ ಅಲೆದಾಡಿದವು; ಹೌದು, ನನ್ನ ಕುರಿಗಳು ಭೂಮಂಡಲದಲ್ಲೆಲ್ಲಾ ಚದರಿ ಹೋದವು; ಯಾರೂ ಅವುಗಳ ಹಿಂದೆ ಹೋಗಿ ಹುಡುಕಲಿಲ್ಲ (ಯೆಹೆಜ್ಕೇಲ 34:4-6).

ಯೇಸುವು ಈ ಕುರುಬರಿಗಿಂತ ಭಿನ್ನವಾಗಿದ್ದಾನೆ. ಆತನು "ಒಳ್ಳೇ" ಕುರುಬನಾಗಿದ್ದಾನೆ. "ಒಳ್ಳೇದಕ್ಕಾಗಿ" ಯೇಸುವು ಉಪಯೋಗಿಸಿದ ಪದವು "ಸುಂದರವಾದ" ಎಂಬಂತೆ ಉಪಯೋಗಿಸಲ್ಪಟ್ಟಿದೆ. ಆತನು ಸುಂದರವಾದ ಕುರುಬನು, ಅವನು ಸೇವೆ ಮಾಡುವದಕ್ಕೆ ಹಣತೆಗೆದು ಕೊಳ್ಳುವವನಲ್ಲ. ಆದರೆ ಆತನು ಕುರಿಗಳನ್ನು ಪ್ರೀತಿಸುವದರಿಂದ ಸೇವೆಮಾಡಲು ತನ್ನ ಸ್ವಂತ ಜೀವವನ್ನು ಕ್ರಯವಾಗಿ ಕೊಟ್ಟನು. ಅವರನ್ನು ಕಾಪಾಡುವದಕ್ಕಾಗಿ ತನ್ನ ಜೀವ ರಕ್ತವನ್ನು ಕೊಟ್ಟನು. ಗಂಡಾಂತರವು ಭಯಪಡಿಸುವಾಗ - ತೋಳವಾಗಲೀ ಸಿಂಹವಾಗಲೀ ಕುರಿಗಳಿಗೆ ತೊಂದರೆ ಕೊಡಲು ಬರುವಾಗ - ತೊಂದರೆಯಿಂದ ತಪ್ಪಿಸಿಕೊಳ್ಳಲು ತನ್ನನ್ನು ಅಡಗಿಸಿ ಕೊಳ್ಳುವದಿಲ್ಲ. ಕುರಿಗಳ ಜೀವ ಮತ್ತು ಜೋಪಾಸನೆಯನ್ನು ತನ್ನ ಸ್ವಂತ ಜೀವಕ್ಕಿಂತ ಮುಂದಾಗಿ ಇಡುತ್ತಾನೆ.

ಯೇಸುವಿಗೆ ತನ್ನ ಕುರಿಗಳೊಂದಿಗೆ ನಿಕಟವಾದ ಸಂಬಂಧವಿರುತ್ತದೆ, ಆ ಸಂಬಂಧವು ತಂದೆಯೊಂದಿಗೆ ಆತನ ಸಂಬಂಧಕ್ಕೆ ಹೋಲಿಕೆಯಾಗಿರುತ್ತದೆ - ಅದು ಯೋಹಾನ 10:14, 15ಕ್ಕೆ ಅನುಗುಣವಾಗಿ ನಿಕಟವಾದದ್ದೂ, ಪ್ರೀತಿಯುಳ್ಳದ್ದೂ, ಒಂದಾಗಿರುವಂಥದ್ದೂ ಹಾಗೂ ಸಾರ್ವಜನಿಕವಾದದ್ದೂ ಆಗಿರುತ್ತದೆ. ಯೇಸುವು ತನ್ನ ಕುರಿಯೊಂದಿಗೆ ತನಗಿರುವ ಸಂಬಂಧವನ್ನು ತಿಳಿಸಲು "ತಿಳಿದಿರುತ್ತವೆ" ಎಂಬ ಪದವನ್ನು ಈ ಎರಡು ವಚನಗಳಲ್ಲಿ ನಾಲ್ಕು ಸಲ ಉಪಯೋಗಿಸುತ್ತಾನೆ, ಆತನು ತನ್ನ ಕುರಿಗಳೊಂದಿಗೆ ಕತ್ತಲೆಯಲ್ಲಿಯೂ ಮತ್ತು ಬೆಳಕಿನಲ್ಲಿಯೂ, ಶ್ರಮೆಯಲ್ಲಿಯೂ ಮತ್ತು ಆರೋಗ್ಯದಲ್ಲಿಯೂ, ಗಂಡಾಂತರದಲ್ಲಿಯೂ ಮತ್ತು ಸಮಾಧಾನದಲ್ಲಿಯೂ, ನಿಂತುಕೊಳ್ಳುತ್ತಾನೆ. ಆತನು ತನ್ನ ಕುರಿಗಳನ್ನು ವೈಯಕ್ತಿಕವಾಗಿ ತಿಳಿದಿರುತ್ತಾನೆ. ಪ್ರತಿಯೊಂದು ಕುರಿಗೆ ಆತನು ಸತತವಾದ ಗಮನವನ್ನು, ಪ್ರೀತಿಯನ್ನು ಮತ್ತು ಚಿಂತನೆಯನ್ನು ಕೊಡುತ್ತಾನೆ. ಆತನು ತನ್ನ ಕುರಿಗಳನ್ನು ಪ್ರೋತ್ಸಾಹಿಸುತ್ತಾನೆ, ಜೋಪಾನ ಮಾಡುತ್ತಾನೆ, ಮತ್ತು ಪ್ರೀತಿಯಿಂದ ಅವುಗಳನ್ನು ಗಮನಿಸುತ್ತಾನೆ; ಗಂಡಾಂತರದ ಸಮಯದಲ್ಲಿ ತನ್ನ ಬಲದಿಂದ ಅವುಗಳನ್ನು ಆವರಿಸಿಕೊಳ್ಳುತ್ತಾನೆ.

ಒಂದು ಅಣೆಕಟ್ಟು ಒಡೆದಾಗ ಪ್ರವಾಹದಲ್ಲಿ ಸಿಕ್ಕಿಹಾಕಿಕೊಂಡ ವಯಸ್ಸಾದ ದಂಪತಿಗಳ ಬಗ್ಗೆ ಒಂದು ಕಥೆಯು ಹೇಳಲ್ಪಟ್ಟಿದೆ. ನೀರು ಮೇಲೇರುತ್ತಲೇ ಇತ್ತು, ರಕ್ಷಿಸುವ ಕಾರ್ಯವು ನಡೆದೇ ಇತ್ತು. ಸುತ್ತುವರಿದು ಹರಿಯುತ್ತಿದ್ದ ನೀರು ರಕ್ಷಿಸುವ ಪ್ರತಿಯೊಂದು ಪ್ರಯತ್ನವನ್ನು ಹೆಚ್ಚೆಚ್ಚು ಅವಸರದಿಂದ ಮಾಡುವಂತೆ ಅವಸರಪಡಿಸುತ್ತಿತ್ತು. ಪ್ರತಿಯೊಂದು ನಿಮಿಷವೂ ಬೆಲೆಯುಳ್ಳದ್ದಾಗಿತ್ತು. ವಯಸ್ಸಾದ ದಂಪತಿಗಳು ತಮ್ಮ ಮನೆಯ ಮೇಲ್ಮಾಳಿಗೆಯ ಮೇಲೆ ನಿಂತುಕೊಂಡು ಸಹಾಯಕ್ಕಾಗಿ ಕಾಯುತ್ತಿದ್ದರು. ರಕ್ಷಿಸುವ ನಾವೆಯು ಬಂದಾಗ ಅದರಲ್ಲಿ ಒಬ್ಬರಿಗೆ ಮಾತ್ರ ಸ್ಥಳಾವಕಾಶವಿತ್ತು. ಗಂಡನು ತನ್ನ ಹೆಂಡತಿ ಆ ಸ್ಥಳದಲ್ಲಿ ಹೋಗ ಬೇಕೆಂದು ಒತ್ತಾಯ ಮಾಡಿದನು. ಆದರೆ ಹೆಂಡತಿ ಖಂಡಿತವಾಗಿ ನಿರಾಕರಿಸಿದಳು. ಗಂಡಾಂತರವನ್ನು ಗಮನಿಸದೇ ಹೆಂಡತಿ ತನ್ನ ಗಂಡನೊಂದಿಗಿರಲು ಬಯಸಿದಳು. ಸಮಯವನ್ನು ಹಾಳು ಮಾಡಲಿಕ್ಕಿರಲಿಲ್ಲ; ನೀರು ಉಕ್ಕೇರಿ ಬರುತ್ತಲೇ ಇತ್ತು. ರಕ್ಷಿಸುವ ದೋಣಿಯ ಚಾಲಕನು ಅವರಿಗೆ, "ಈ ಪ್ರಯಾಣಿಕರನ್ನು 'ನಾನು' ಬೇಗನೇ ದಢಕ್ಕೆ ತಲುಪಿ, ನಿಮ್ಮಿಬ್ಬರಿಗಾಗಿ ಕೂಡಲೇ ಹಿಂದಿರುಗಿ ಬರುವೆನು, ನಾನು ಬಂದು ಮುಟ್ಟಲಿಕ್ಕೆ ನಿರೀಕ್ಷೆಯುಳ್ಳವನಾಗಿದ್ದೇನೆ. ಆದರೆ ನಾನು ಒಂದು ಗಂಡಾಂತರವನ್ನು ತೆಗೆದು ಕೊಳ್ಳುತ್ತಿದ್ದೇನೆ. ನೀರು ಭಾರದಿಂದ ಮೇಲೇರುತ್ತಲೇ ಇದೆ" ಎಂದು ಹೇಳಿದನು. ಅವನು ಕೂಡಲೇ ಮೇಲಿನ ದಡಕ್ಕೆ ಹೋಗಿ, ಜನರನ್ನು ಅಲ್ಲಿ ಇಳಿಸಿ, ಹಿಂದಿರುಗಿ ಬಂದನು. ಆದರೆ ಧುಮುಕ್ಕುತ್ತಿರುವ

ಪ್ರವಾಹದಲ್ಲಿ ಮನೆಯೂ ಆ ದಂಪತಿಗಳೂ ಕೊಚ್ಚಿಕೊಂಡು ಹೋಗಿದ್ದನು ಅವನು ಕಂಡುಕೊಂಡನು. ತಾವಿಬ್ಬರೂ ಒಟ್ಟಾಗಿ ಸಾಯಬಹುದೆಂಬುದನ್ನು ತಿಳಿದುಕೊಂಡು ಈ ಪ್ರೀತಿಯ ಹೆಂಡತಿಯು ತನ್ನ ಗಂಡನೊಂದಿಗೆ ಉಳಿದುಕೊಂಡಿದ್ದಳು. ಈ ಪ್ರೀತಿಗಿಂತ ಹೆಚ್ಚು ದೊಡ್ಡ ಪ್ರೀತಿ ಯಾವುದಾದರೂ ಇರುವುದೋ? ಹೌದು, "ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯು ಯಾವುದೂ ಇಲ್ಲ" (ಯೋಹಾನ 15:13). ಇತರರು ಜೀವಿಸಲಿಕ್ಕಾಗುವಂತೆ ಸಾಯುವುದು ಎಲ್ಲಕ್ಕಿಂತ ಅತೀ ದೊಡ್ಡ ಪ್ರೀತಿಯಾಗಿದೆ. ನಮ್ಮ ಕುರಿಬನಿಗೆ ಈ ರೀತಿಯ ಪ್ರೀತಿ, ಆಳವಾದ ಪ್ರೀತಿಯು, ಮರಣಕ್ಕಿಂತ ಹೆಚ್ಚು ಬಲವಾದ ಪ್ರೀತಿಯು ಇರುವುದು. ಕುರಿಗಳಿಗಾಗಿ ಆತನು ತನ್ನ ಪ್ರಾಣವನ್ನು ಕೊಡುವನು (ಯೋಹಾನ 10:15).

ಯೋಹಾನನ ಸುವಾರ್ತೆಯು ಮೊದಲನೆಯ ಶತಮಾನದ ಅಂತ್ಯದಲ್ಲಿ, ಬಹುಶಃ ಕ್ರಿ.ಶ. 85-95ರಲ್ಲಿ ಬರೆಯಲ್ಪಟ್ಟಿತೆಂದು ಎಲ್ಲಾ ಪುರಾವೆಯು ಸೂಚಿಸುತ್ತದೆ. ಆದುದರಿಂದ, ಮೊದಲಿನ ವಾಚಕರು, ಯೇಸುವು ತನ್ನ ಕುರಿಗಳಿಗಾಗಿ ತನ್ನ ಪ್ರಾಣವನ್ನು ಕೊಡುವೆನೆಂದು ಹೇಳಿದ್ದನ್ನು ಅಷ್ಟೇ ಅಲ್ಲ ಆತನು ಅದನ್ನು ನಿಜವಾಗಿ ಮಾಡಿದ್ದನ್ನೂ ತಿಳಿದಿದ್ದರು. ಸಭೆಗಾಗಿ ಸಾಯುವದರಿಂದ ತನ್ನ ಕುರಿಗಳಿಗಾಗಿ ಚಿಂತಿಸುವೆನೆಂಬುದನ್ನು ಅಂತಿಮವಾಗಿ ವ್ಯಕ್ತಪಡಿಸಿದ್ದನು.

ಈ ಸತ್ಯವು ನಮಗೆ ಎಷ್ಟೋ ಬಲವನ್ನು ಕೊಡುವಂಥದ್ದಾಗಿರುತ್ತದೆಯಲ್ಲವೇ! ನಮ್ಮನ್ನು ನಡಿಸಲಿಕ್ಕೆ ನಮಗೆ ಸರ್ವಶಕ್ತನಾದ ಕರ್ತನಿರುವನು ನಮ್ಮಲ್ಲಿ ಪ್ರತಿಯೊಬ್ಬರನ್ನೂ ಆತನು ಪ್ರೀತಿಸುವನು ಮತ್ತು ಆತನು ತನ್ನ ಮಾರ್ಗದರ್ಶನವನ್ನು ಅಷ್ಟೇ ಅಲ್ಲ, ತನ್ನ ಪ್ರೀತಿಯನ್ನೂ ಸಂರಕ್ಷಣೆಯನ್ನೂ ವಾಗ್ದಾನ ಮಾಡಿರುವನು. "ದೇವರಿಗೆ ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿರಲಾಗಿ ಆತನ ಕೂಡ ಸಮಾಧಾನವಾದ ನಮಗೆ ಆ ಮಗನಿರುವ ಜೀವದಿಂದ ರಕ್ಷಣೆಯಾಗುವದು ಮತ್ತೂ ನಿಶ್ಚಯವಲ್ಲವೇ" (ರೋಮಾಪುರ 5:10). ನಾವು ನಮ್ಮ ಪಾಪದಲ್ಲಿದ್ದಾಗ ಯೇಸುವು ನಮಗೋಸ್ಕರ ಸಾಯುವಷ್ಟು ನಮ್ಮನ್ನು ಪ್ರೀತಿಸಿದರೆ, ಈಗ ನಾವು ಆತನಿಗಾಗಿ ಜೀವಿಸಲು ಮತ್ತು ಆತನ ಕುರಿಗಳಾಗಿ ಜೀವಿಸಲು ಪ್ರಯತ್ನಿಸುತ್ತಿರುವಾಗ, ನಮ್ಮ ರಕ್ಷಣೆಗಾಗಿ ಎಷ್ಟೋ ಹೆಚ್ಚಾಗಿ ನಮಗಾಗಿ ನೋಡುವನಲ್ಲವೇ?

## ಮುಕ್ತಾಯ

ಯೋಹಾನ 10ರಲ್ಲಿರುವ ಕ್ರಿಸ್ತನ ಸಾಮ್ಯವು ಸಭೆಯು ಕ್ರಿಸ್ತನ ಮಂದೆಯಾಗಿರುವುದು ಮತ್ತು ಆತನಿಗೆ ಒಳಪಟ್ಟ ಎಲ್ಲಾ ಕುರಿಗಳಿಂದ ಮಾಡಲ್ಪಟ್ಟಿರುವುದು ಎಂಬುದನ್ನು ಘೋಷಿಸುತ್ತದೆ. "ಇದಲ್ಲದೆ ಈ ಹಟ್ಟಿಗೆ ಸೇರದಿರುವ ಇನ್ನು ಬೇರೆ ಕುರಿಗಳು ನನಗೆ ಅವೆ, ಅವುಗಳನ್ನೂ ನಾನು ತರಬೇಕು; ಅವು ನನ್ನ ಸ್ವರಕ್ಕೆ ಕಿವಿಗೊಡುವವು; ಆಗ ಒಂದೇ ಹಿಂಡು ಆಗುವದು, ಒಬ್ಬನೇ ಕುರುಬನಿರುವನು" (ಯೋಹಾನ 10:16). "ಬೇರೆ ಕುರಿಗಳು" ಎಂದು ಯಾರಿಗೆ ಆತನು ಸಂಬಂಧಿಸಿ ಹೇಳಿದನೋ ಅವರು ಕನಿಷ್ಠ ಪಕ್ಷ, ಆತನ ಸ್ವರವನ್ನು ಕೇಳಿ ಆತನ ಮಂದೆಯೊಳಗೆ ಬರುವ ಅನ್ಯಜನರನ್ನು ಒಳಗೊಂಡಿರುವರು. ಆತನ ಸಾಮ್ಯಕ್ಕೆ ಒಂದೇ ಹಿಂಡು, ಒಬ್ಬನೇ ಕುರುಬ ಇರುವವು. ನಾವು ಒಬ್ಬ ಕುರುಬನ ಅಧೀನತೆಯಲ್ಲಿ ಆತನ ಹಿಂಡಿನೊಳಗೆ ಇರುವೆವು, ಇಲ್ಲವೇ ನಾವು ಇರುವದಿಲ್ಲ. ನಾವು ಆತನ ಸಭೆಯಲ್ಲಿ, ಹೊಸ ಒಡಂಬಡಿಕೆಯ ಸಭೆಯಲ್ಲಿ ಇರುವೆವು ಇಲ್ಲವೇ ಇರುವದಿಲ್ಲ.

ಕುರಿಮಂದೆ ಮತ್ತು ಕುರುಬನ ಸಾಮ್ಯದ ವ್ಯಾವಹಾರಿಕ ಅನ್ವಯಗಳಲ್ಲಿ ಒಂದು, ಅದು ನಮ್ಮ ಭಯಗಳನ್ನು ಶಾಂತಗೊಳಿಸುವುದು, ನಮ್ಮ ಚಿಂತೆಗಳನ್ನು ಓಡಿಸುವುದು ಆಗಿರುತ್ತದೆ. ನಾವು ಯಾರಾಗಿದ್ದೇವೆಂಬುದನ್ನು ನಾವು ಬಲ್ಲೆವು ಯಾಕಂದರೆ ನಾವು ಆತನ ಕುರಿಗಳಾಗಿದ್ದೇವೆ; ನಾವು ಏನು ಮಾಡಬೇಕೆಂಬುದನ್ನು ಬಲ್ಲೆವು, ಯಾಕಂದರೆ ನಾವು ಆತನ ಧ್ವನಿಯಿಂದ ನಾವು ನಡಿಸಲ್ಪಡುತ್ತೇವೆ; ನಮ್ಮ ಭವಿಷ್ಯವು ಭದ್ರವಾಗಿದೆ, ಯಾಕಂದರೆ ಆತನ ಜೀವನ ಮತ್ತು ಮರಣದಿಂದ ರಕ್ಷಿಸಲ್ಪಟ್ಟಿದ್ದೇವೆ. ಆತನು ನಮ್ಮ ಕರ್ತನಾಗಿರುವದರಿಂದ ನಾವು ಒಳಪಟ್ಟಿರುವ ಭಾವನೆಯುಳ್ಳವರಾಗಿದ್ದೇವೆ; ಪರಲೋಕದ ಒಡೆಯನು ನಮ್ಮ ನಾಯಕನಾಗಿರುವದರಿಂದ ನಮಗೆ ನಿಜವಾದ ಜ್ಞಾನವಿದೆ; ಮತ್ತು ನಮಗಾಗಿ ತನ್ನ ಪ್ರಾಣವನ್ನು ಕೊಡಲು ಸಿದ್ಧನಾದ ಸರ್ವಶಕ್ತನಾದ ಕ್ರಿಸ್ತನಿಂದ ನಮಗೆ ಪಾರಲೌಕಿಕ ಜೋಪಾಸನೆಯಿದೆ. ನಾವು ಯಾರಾಗಿದ್ದೇವೆಂಬುದನ್ನು ತಿಳಿದುಕೊಂಡರೆ, ನಮಗೆ ಬಿದ್ದುಹೋಗದ ಮಾರ್ಗದರ್ಶನವಿರುವುದಾದರೆ, ಮತ್ತು ಕ್ರಿಸ್ತನ ತ್ಯಾಗಮಯ ಕಾಪಾಡುವಿಕೆಯಿರುವುದಾದರೆ, ನಾವು ಯಾಕೆ ಭಯಪಡಬೇಕು? ನಮ್ಮ ಕುರುಬನಲ್ಲಿಯ ನಂಬಿಕೆಯು ನಮ್ಮ ಭಯಗಳನ್ನು ತೆಗೆದು ಹಾಕುವುದು.

ಕೀರ್ತನೆ 23ರ ಮಾತುಗಳನ್ನು ನಾವು ಅನ್ವಯಿಸಿಕೊಳ್ಳಬಹುದು. ಹಾಗೂ ಮೋಶೆಯ ಕಾಲದಲ್ಲಿ ದೇವರ ಬಗ್ಗೆ ದಾವೀದನಿಂದ ಬರೆಯಲ್ಪಟ್ಟಿದ್ದರೂ ಯೇಸುವಿಗೆ ಅನ್ವಯಿಸಲ್ಪಡ ಬಹುದು:

> [ಯೇಸುವು] ನನಗೆ ಕುರುಬನು;
> ಕೊರತೆ ಪಡೆನು.
> ಆತನು ಹಸುರುಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ;
> ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರಮಾಡುತ್ತಾನೆ.
> ನನ್ನ ಪ್ರಾಣವನ್ನು ಉಜ್ಜೀವಿಸ ಮಾಡಿ
> ತನ್ನ ಹೆಸರಿಗೆ ತಕ್ಕಂತೆ ನೀತಿ ಮಾರ್ಗದಲ್ಲಿ
> ನನ್ನನ್ನು ನಡಿಸುತ್ತಾನೆ.
> ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ
> ನೀನು ಹತ್ತಿರವಿರುವದರಿಂದ ಕೇಡಿಗೆ ಹೆದರೆನು;
> ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯಕೊಡುತ್ತವೆ.
> ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು
> ಸಿದ್ಧ ಪಡಿಸುತ್ತೀ;
> ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ.
> ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ
> ನಿಶ್ಚಯವಾಗಿ ನನ್ನ ಜೀವನದಲ್ಲೆಲ್ಲಾ ಶುಭವೂ
> ಕೃಪೆಯೂ ನನ್ನನ್ನು ಹಿಂಬಾಲಿಸುವವು
> ಮತ್ತು ನಾನು ಸದಾಕಾಲವೂ
> [ಒಳ್ಳೆಯ ಕುರುಬನಾದ ನನ್ನ ರಕ್ಷಕನೊಂದಿಗೆ] ವಾಸಿಸುವೆನು.

ವರ್ಷಗಳ ಹಿಂದೆ ಬಹಳ ಯುವ ಪ್ರಸಂಗಿಯಾಗಿ, ಒಬ್ಬ ಕ್ರೈಸ್ತ ಸಹೋದರನ ಶವಸಂಸ್ಕಾರದಲ್ಲಿ ಭಾಗವಹಿಸಿದೆನು. ಆ ಸಮಯದಲ್ಲಿ ಸುವಾರ್ತೆಯನ್ನು ಪ್ರಸಂಗಿಸಿದವನು ನನ್ನ ಸ್ವಂತ ಸಹೋದರನಾಗಿದ್ದನು. ನಾನು ಜ್ಞಾಪಿಸಿದವನು ನನ್ನ ಸ್ವಂತ ಸಹೋದರನಾಗಿದ್ದನು. ನಾವು ಜ್ಞಾಪಿಸಿಕೊಳ್ಳುವ ಪ್ರಕಾರ, ಸತ್ತು ಹೋದ

ಮನುಷ್ಯನು ತನ್ನ ನಲ್ವತ್ತರ ಪ್ರಾಯದಲ್ಲಿದ್ದನು. ಈ ಮನುಷ್ಯನು ಸಾಯುವಾಗ ಹೇಳಿದ ಮಾತುಗಳನ್ನು ನನ್ನ ಸಹೋದರನು ತನ್ನ ಪ್ರಸಂಗದಲ್ಲಿ ಹೇಳಿದನು. ಅವನು ಕೀರ್ತನೆ 23ನ್ನು ಮೃದುವಾಗಿ ಹೇಳಿದನು ಮತ್ತು ಕಿರ್ತನೆಯ ಅಂತಿಮ ಪದವು ಉಸಿರಲ್ಪಡು ವಾಗ, ಅವನ ಶ್ವಾಸ ನಿಂತುಹೋಯಿತು ಎಂಬುದನ್ನು ವಿವರಿಸಿದನು. ಅವನು ತನ್ನ ಜೀವನದ ಕೊನೆಯ ಕ್ಷಣಗಳಲ್ಲಿ, ಕೀರ್ತನೆ 23ನ್ನು ಹೇಳುವದರಲ್ಲಿ ಆದರಣೆ ಹೊಂದಿದನು.

ನಮ್ಮ ಕುರುಬನಂತೆ ದೇವರ ಮೇಲೆ ಕೇಂದ್ರೀಕರಿಸುವಾಗ ಸಮಾಧಾನ, ಪ್ರಸನ್ನತೆಗಳು ತೊಂದರೆ ಹೊಂದಿದ, ಭಯವುಳ್ಳ ಹೃದಯಗಳನ್ನು ಪ್ರವೇಶಿಸುವವು. ಯೇಸುವನ್ನು ಒಳ್ಳೇ ಕುರುಬನಂತೆ ಮತ್ತು ಆತನ ಅನುಯಾಯಿಗಳನ್ನು ಆತನ ಕುರಿಗಳಂತೆ ಚಿತ್ರೀಕರಿಸುವ ಈ ಸಾಮ್ಯವು ಅದೇ ರೀತಿಯಲ್ಲಿ ನಮ್ಮ ಚಿಂತೆಗಳನ್ನು ತೆಗೆದು ಹಾಕುವವು.

ಕ್ರಿಸ್ತನ ಮಂದೆಯೊಳಗೆ ನೀವು ಇಲ್ಲದಿದ್ದರೆ, ನೀವು ಆತನ ಹಟ್ಟಿಯೊಳಗೆ ಕ್ರಿಸ್ತನು ತಾನೇ ಆಗಿರುವ ಒಂದೇ ಮಾರ್ಗದ ಮುಖಾಂತರ ಪ್ರವೇಶಿಸತಕ್ಕದ್ದು. ಕ್ರಿಸ್ತನು ತನ್ನ ವಿವರವಾದ, ವಿಶಾಲವಾದ ಸಾಮ್ಯದ ಮಧ್ಯದಲ್ಲಿ (ಯೋಹಾನ 10:1-5, 10-18) ಒಂದು ಚಿಕ್ಕ ಸಾಮಯ್ಯವನ್ನು ಹೇಳುತ್ತಾನೆ (ಯೋಹಾನ 10:7-9). "ನಾನೇ ಈ ಬಾಗಲು; ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು ಒಳಗೆ ಹೋಗುವನು, ಹೊರಗೆ ಬರುವನು, ಮೇವನ್ನು ಕಂಡು ಕೊಳ್ಳುವನು" (ಯೋಹಾನ 10:9). ಕ್ರಿಸ್ತನು ಅನಂತರ, "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ" (ಯೋಹಾನ 14:6). ಒಬ್ಬನು ಆತನ ವಾಕ್ಯಗಳಿಗೆ ವಿಧೇಯನಾಗುವಾಗ, ಕ್ರಿಸ್ತನ ಹಿಂಡನ್ನು ಕ್ರಿಸ್ತನ ಮುಖಾಂತರ ಪ್ರವೇಶಿಸುವನು (ಯೋಹಾನ 8:24; ಲೂಕ 13:3; ಮತ್ತಾಯ 10:32, 33; ಮಾರ್ಕ 16:16).

ಒಳ್ಳೇ ಕುರುಬನಾದ ಕ್ರಿಸ್ತನ ಬಳಿಗೆ ಬನ್ನಿರಿ. ಆತನ ಮಂದೆಯೊಳಗೆ ಪ್ರವೇಶಿಸಿರಿ, ನಿಮ್ಮ ಜೀವನದ ಕುರುಬನಾಗಿರಲು ಆತನನ್ನು ಬಿಡಿರಿ, ಮತ್ತು ಆತನು ಕೊಡುವ ಸಮೃದ್ಧ ಜೀವನದಲ್ಲಿ ಪಾಲುಗಾರರಾಗಿರಿ (ಯೋಹಾನ 10:10). ಆತನ ಮಂದೆಯಲ್ಲಿ, ನಿಮಗೆ ರಕ್ಷಣೆಯಿರುವುದು (ಯೋಹಾನ 10:9), ಸಮೃದ್ಧ ಜೀವನವಿರುವುದು (ಯೋಹಾನ 10:10), ಭಯದಿಂದ ಬಿಡುಗಡೆಯಿರುವುದು (ಯೋಹಾನ 10:12), ಪ್ರೀತಿ (ಯೋಹಾನ 10:15), ಮಾರ್ಗದರ್ಶನ (ಯೋಹಾನ 10:4, 5), ಮತ್ತು ನಿತ್ಯಜೀವ (ಯೋಹಾನ 10:17) ಇರುವುದು. ಕ್ರಿಸ್ತನ ಮಂದೆಯಲ್ಲಿ ಕುರಿಯಂತೆ ಇರುವದಕ್ಕಿಂದ ಹೆಚ್ಚು ಉತ್ತಮವಾದ ಮಾರ್ಗವನ್ನು ನೀವು ಯೋಚಿಸಬಹುದೋ?

---

ಟಿಪ್ಪಣಿ

[1]ಯೇಸುವಿನ ಸಾಮ್ಯವನ್ನು ಯೋಹಾನನು "ಒಂದು ಜ್ಞಾನೋಕ್ತಿ" ಎಂದು ಕರೆದನು. ಅವನು *paroimia* ಎಂಬ ಪದವನ್ನು ಉಪಯೋಗಿಸಿದನು. ಹೊಸ ಒಡಂಬಡಿಕೆಯ ಕೆಲವು ಆವೃತ್ತಿಗಳು "ಫ್ಯಾರಾಬಲ್" ಎಂದು ಭಾಷಾಂತರಿಸಿವೆ; ಆದರೆ ಹೊಸ ಒಡಂಬಡಿಕೆಯ ಗ್ರೀಕ ಪದವು "ಫ್ಯಾರಬಲ್‌ಗೆ" *parabola* ಎಂಬ ಸಂಪೂರ್ಣವಾಗಿ ಭಿನ್ನವಾದ ಪದವಿದೆ. ನಮ್ಮ ಕರ್ತನ ಜೀವನದ ವೃತ್ತಾಂತದಲ್ಲಿ ಯೋಹಾನನು *parabola* ಎಂಬ ಪದವನ್ನು ಎಂದೂ ಉಪಯೋಗಿಸಿರುವದಿಲ್ಲ. ಮತ್ತು ಮತ್ತಾಯ, ಮಾರ್ಕ ಹಾಗೂ ಲೂಕರು ತಮ್ಮ ವೃತ್ತಾಂತದಲ್ಲಿ

*paroimia* ಎಂಬ ಪದವನ್ನು ಎಂದೂ ಉಪಯೋಗಿಸಿರುವದಿಲ್ಲ. ಯೋಹಾನನು ಉಪಯೋಗಿಸಿದ ಪದದ ಬೆಳಕಿನಲ್ಲಿ, ಯೇಸುವಿನ ಉದಾಹರಣೆಯು ಇಲ್ಲವೇ ಸಾಮ್ಯವು ವಿಸ್ತರಿಸಲ್ಪಟ್ಟ ಗಾದೆಮಾತಿನಂತೆ ನೋಡಲ್ಪಡಬೇಕು. ಕೇವಲ ಒಂದು ಸಾಧಾರಣ ಹೋಲಿಕೆಯಂತಲ್ಲ, ಆದರೆ ಒಟ್ಟಾಗಿ ಹಿಡಿದ ಯೋಚನೆಯು ಪೂರ್ಣ ರಹಸ್ಯವಾದ ಹೇಳಿಕೆಯಂತೆ ನೋಡಬೇಕು.

---

## ಅಧ್ಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ನೀನು ನಿರಾಶನಾದಾಗ ಏನು ಮಾಡುವಿ?
2. ಯೋಹಾನನ ಸುವಾರ್ತೆಯಲ್ಲಿ ಎಷ್ಟು ಸಾಮ್ಯಗಳು ಕೊಡಲ್ಪಟ್ಟಿವೆ?
3. ಕ್ರಿಸ್ತನ ಸಭೆಯ ಕರ್ತನಾಗಿರುವುದು ನಮಗೆ ಮತ್ತು ಆತನಿಗೆ ಏನು ಅರ್ಥವಾಗುತ್ತದೆ ಎಂಬುದನ್ನು ವಿವರಿಸಿರಿ.
4. ಕ್ರಿಸ್ತನು ತನ್ನ ಮಂದೆಗಾಗಿ ಚಿಂತಿಸುವನು ಎಂಬ ಸಂಗತಿಯು ನಿನ್ನನ್ನು ಹೇಗೆ ಪ್ರೋತ್ಸಾಹಿಸುವುದು?
5. ಯೋಹಾನ 10:10ರ ಹಿನ್ನೆಲೆಯನ್ನೂ ನಿರ್ದಿಷ್ಟವಾದ ಅರ್ಥವನ್ನು ಚರ್ಚಿಸಿರಿ.
6. ಕುರಿಗಳಿಗೆ ತಮ್ಮನ್ನು ತಾವೇ ನಡಿಸಿಕೊಳ್ಳಲು ಸಾಮರ್ಥ್ಯವಿಲ್ಲದವುಗಳಾಗಿರುವದನ್ನು ವಿವರಿಸಿರಿ.
7. ಕುರುಬನು ತನ್ನ ಕುರಿಗಳಿಗೆ ಹೇಗೆ ನಾಯಕತ್ವ ವಹಿಸುವನು?
8. ದೈವಿಕ ಮಾರ್ಗದರ್ಶವನ್ನು ತಿರಸ್ಕರಿಸುವ ಜನರಿಗೆ ಯಾವ ರೀತಿಯ ಭವಿಷ್ಯವಿರುವುದು?
9. “ಕೂಲಿಯಾಳನ್ನು” ವಿವರಿಸಿರಿ ಮತ್ತು ಅವನನ್ನು ಒಳ್ಳೇ ಈ ಕುರುಬನೊಂದಿಗೆ ಹೋಲಿಸಿರಿ?
10. ಯೆಹೆಜ್ಕೇಲ 34:4-6ರಲ್ಲಿ ಚಿತ್ರಿಸಿರುವಂತೆ ಅಪನಂಬಿಗಸ್ತ ಕುರುಬನ ಗುಣಲಕ್ಷಣಗಳನ್ನು ಕೊಡಿರಿ.
11. ಯೋಹಾನ 10ರಲ್ಲಿ “ತಿಳಿದಿರು” ಎಂಬ ಪದದ ಉಪಯೋಗವನ್ನು ಗಮನಿಸಿರಿ ಮತ್ತು ಈ ಪದದ ಅರ್ಥದ ಮೇಲೆ ವ್ಯಾಖ್ಯಾನಿಸಿರಿ (ವಚನ 14 ಮತ್ತು 15 ಗಮನಿಸಿರಿ).
12. ಯೋಹಾನ 10:16ರ “ಇತರ ಕುರಿಗಳು” ಯಾರು?
13. ಒಬ್ಬ ವ್ಯಕ್ತಿಯು ಕ್ರಿಸ್ತನ ಕುರಿಗಳಲ್ಲಿ ಒಬ್ಬನು ಹೇಗಾಗುತ್ತಾನೆ?

© 2009 Truth for Today